# ಲಿಂಗ ಭಂಗ

ನಮ್ಮ ಆದ್ಯ ವಚನಕಾರ ದೇವರ ದಾಸಿಮಯ್ಯನು ಹೆಣ್ಣಿಗೆ ಹೆಣ್ಣು ಆತ್ಮವಿರುತ್ತದೆಯೆಂದೂ, ಗಂಡಿಗೆ ಗಂಡು ಆತ್ಮವಿರುತ್ತದೆಯೆಂದೂ– ಇವೆರೆಡು ಲಿಂಗಗಳ ನಡುವೆ ಸುಳಿದಾಡುವ ಆತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲವೆಂದು ಹೇಳುತ್ತಾನೆ. ಅವನ ಪ್ರಕಾರ 'ಆತ್ಮ' ಹೆಣ್ಣು ಗಂಡುಗಳ ನಡುವೆ ಆಗಿಂದಾಗ್ಗೆ ಸುಳಿದಾಡುವ– ಅದಲು ಬದಲಾಗುವ ಶಕ್ತಿ ವಿಶೇಷ! ಗಂಡಿನ ಒಳಗೆ ಇದ್ದಾಗ ಗಂಡಾಗುತ್ತದೆ; ಹೆಣ್ಣಿನ ಒಳಗೆ ಇದ್ದಾಗ ಹೆಣ್ಣಿನಂತೆ ವರ್ತಿಸುತ್ತದೆ. ಅಂದರೆ ಅದಕ್ಕೆ ತನ್ನದೇ ಆದ ವ್ಯಕ್ತಿತ್ವ, ಸ್ವರೂಪ, ಸ್ವಂತಿಕೆ ಇಲ್ಲವೇ?– ಎಂಬ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ಬಹುಶಃ ಈ ಪರಿಕಲ್ಪನೆ ಅಥವಾ ನಂಬಿಕೆ ದೇವರ ದಾಸಿಮಯ್ಯನ ಕಾಲಘಟ್ಟದ್ದು. ಈ ನಂಬಿಕೆ ಭಾರತೀಯರಲ್ಲಿ ಇಂದಿಗೂ ಹರಿದು ಬಂದಿದೆ; ಈ ನಂಬಿಕೆ ಜೀವಂತವೂ ಇದೆ.

ಇದು ಭಾರತೀಯರಲ್ಲಿರುವ ಪುನರ್ಜನ್ಮದ ನಂಬಿಕೆಯ ಮೇಲೆ ನಿಂತಿರುವಂಥದ್ದು. ಆತ್ಮವೆಂಬುದು ಕೂಡ ಈ ನಂಬಿಕೆಯ ಆಧಾರದ ಮೇಲೆ ಜನಮನದಲ್ಲಿ ಬದುಕಿರುವಂಥದ್ದು. ಆ ನಂಬಿಕೆಯು ಅಲ್ಲಾಡಲು ಶುರುವಾದರೆ ಅದರ ಬುಡವು ಅಲ್ಲಾಡತೊಡಗುತ್ತದೆ. ವೈಚಾರಿಕ ನೆಲೆಯಲ್ಲಿ ವಿಶ್ಲೇಷಣೆ ಮಾಡಿ ನೋಡಿ: ಪುನರ್ಜನ್ಮವೆಂಬುದು ಇಲ್ಲ. ಸೃಷ್ಟಿಯು ಜನಿಸುತ್ತದೆ, ಸಾಯುತ್ತದೆ. ಅದು ಸತ್ತ ಮೇಲೆ ಅದರ ಅಸ್ತಿತ್ವ ಮುಗಿಯುತ್ತದೆ. ಅದು ತನ್ನ ಸಂಕುಲ ಮುಂದುವರಿಕೆಗಾಗಿ ತನ್ನ ವಂಶವಾಹಿಗಳನ್ನು ಮತ್ತೊಂದರ ಒಡಲಲ್ಲಿ ಸ್ಥಲಿಸಿ ಕರ್ತವ್ಯ ಮುಗಿಸುತ್ತದೆ. ಆ ವಂಶವಾಹಿಗಳು ತಮ್ಮ ಪೂರ್ವಿಕರ ಭೌತಿಕ– ಬೌದ್ಧಿಕ ಗುಣ ಲಕ್ಷಣಗಳನ್ನು ಮುಂದುವರಿಸಿಕೊಂಡು ಬರುತ್ತವೆ. ಅದನ್ನೇ ಪುನರ್ಜನ್ಮವೆಂದು ಕರೆಯುವುದು ಅವೈಚಾರಿಕವಾದುದು. ಗಂಡು ಸತ್ತ ಮೇಲೆ ಅದರಲ್ಲಿರುವ ಆತ್ಮ (ಮನಸ್ಸು?) ಅವನೊಡನೆಯೇ ಪ್ರಕೃತಿಯಲ್ಲಿ ವಿಲೀನವಾಗುತ್ತದೆ; ಹೆಣ್ಣು ಸತ್ತಮೇಲೆ ಅದರೊಳಗಿರುವ ಆತ್ಮವೂ ಅದೇ ಗತಿ ಕಾಣುತ್ತದೆ. ಅಂದ ಮೇಲೆ ಅಲ್ಲಿಂದಿಲ್ಲಿಗೆ ಸುಳಿದಾಡುವ ಪ್ರಶ್ನೆಯೇ ಬರುವುದಿಲ್ಲ.

ಅಂದರೆ ಹೆಣ್ಣಿನೊಳಗಿರುವ ಆತ್ಮ ಹೆಣ್ಣಿನದೇ ಆಗಿರುತ್ತದೆ; ಗಂಡಿನೊಳಗಿರುವ ಆತ್ಮ ಗಂಡಿನದೇ ಆಗಿರುತ್ತದೆ. ಅದು ತನ್ನ ಲಿಂಗ ಸಹವರ್ತಿಯಾಗಿ ಕಾರ್ಯ ನಿರ್ವಹಿಸುತ್ತದೆ. ಆ ಲಿಂಗದ ಅಂತ್ಯದ ಜೊತೆ ಅದೂ ಅಂತ್ಯವಾಗುತ್ತದೆ.

ಈ ಸತ್ಯವನ್ನು ನಾವು ಅರ್ಥ ಮಾಡಿಕೊಳ್ಳತೊಡಗಿದಾಗ ಲಿಂಗ ಆಧಾರಿತ ಆಹಂಕಾರದ ಮೌಲ್ಯ ವಿವೇಚನೆಯ ಬಗ್ಗೆ ಮನಸ್ಸು ಹರಿಸಬಹುದು. ಗಂಡಿಗೆ ತಾನು ಗಂಡೆಂಬ ಅಭಿಮಾನವಿರಬೇಕು; ಹೆಮ್ಮೆಯೂ ಇರಬೇಕು. ಹೆಣ್ಣಿಗೂ ಇದೇ ಮನಸ್ಥಿತಿ ಇರಬೇಕು. ಆದರೆ ಈ ಅಭಿಮಾನ– ಹೆಮ್ಮೆಗಳು ತಾನೇ ಹೆಚ್ಚೆಂಬ ಆಹಂಕಾರದ ಸ್ವರೂಪವನ್ನು ಪಡೆಯಬಾರದು. ನಮ್ಮ ಪ್ರಾಚೀನ ಪರಂಪರಾಗತ ಪುನರ್ಜನ್ಮದ ನಂಬಿಕೆಯ ಪ್ರಕಾರ ಬೇರೆ ಬೇರೆ ಲಿಂಗ ಪ್ರವೇಶ ಮಾಡಿದ ಆತ್ಮ ಹಿಂದಿನ ಜನ್ಮದ ನೆನಪುಗಳನ್ನು, ಲಿಂಗಾಧಾರಿತವಾಗಿ ಅನುಭವಿಸಿದ ಕಷ್ಟ ಕೋಟಲೆಗಳನ್ನು ಹೊಸ ಜನ್ಮದಲ್ಲಿ ಬೇರೆ ಲಿಂಗದ ದಿರಿಸಿನಲ್ಲಿ ತೀರಿಸಿಕೊಳ್ಳಲು ಉದ್ದೇಶಿಸಿದರೆ ಎಂಥ ಅಪಾಯವಾದೀತು, ಕಲ್ಪಿಸಿಕೊಳ್ಳಿ. ಆದುದರಿಂದಲೇ ಜನ್ಮಾಂತರವೆಂಬುದು ಕಲ್ಪನೆಯ ಕೂಸೆಂದು ವೈಚಾರಿಕವಾಗಿ ವಿಶ್ಲೇಷಿಸಿ, ಈಗ ಜನಿಸಿರುವ ಲಿಂಗವು ತನ್ನ ದೈಹಿಕ– ಮಾನಸಿಕ ಪ್ರವೃತ್ತಿಗಳ ವರ್ತನೆಗಳಿಗನುಗುಣವಾಗಿ ಜೀವಿಸಬೇಕಾಗುತ್ತದೆ. ಅದೇ ಸರಿಯಾದ ಪ್ರಕೃತಿಯ ಚಲನ ಶೀಲ, ಸಮತೋಲನ ನಿಯಮ. ಇದೇ ಲಿಂಗ ಸಾಮರಸ್ಯ ಅಥವಾ ಹೊಂದಾಣಿಕೆಯ ಅನುಕ್ರಮ ವಿಧಾನ. ಇದರಿಂದ ಪ್ರವೃತ್ತಿಯ ಬಯಕೆಗಳು ಈಡೇರಿ, ಸಂಕುಲ ಮುಂದುವರಿಯಲು ಸಾಧ್ಯವಾಗುತ್ತದೆ. ಇಲ್ಲಿ ಒಂದು ಲಿಂಗ ಮತ್ತೊಂದು ಲಿಂಗದೊಳಗೆ ಐಕ್ಯವಾಗುವ ಅಥವಾ ಅರ್ಪಿತವಾಗುವ ಕ್ರಿಯೆ ಜರುಗುವುದರಿಂದ ಲಿಂಗಾಧಾರಿತ ಆಹಂಕಾರ ನಿರಶನ ಹೊಂದಿ ಸಮಾನತೆ ಮೂಡುತ್ತದೆ. ಇದನ್ನೇ ನಾವು ಲಿಂಗ ಭಂಗ ಕ್ರಿಯೆಯೆಂದು ಗುರುತಿಸಬೇಕಾಗುತ್ತದೆ.

ಆದರೆ ನಮ್ಮ ವ್ಯವಸ್ಥಿತ ರೂಢಿಗತ ಸಮಾಜದಲ್ಲಿ ಲಿಂಗಾಧಾರಿತ ಶೋಷಣೆ ನಿರಂತರವಾಗಿ ನಡೆದು ಬಂದಿರುವುದರಿಂದ, ಮಾನಸಿಕ ಮತ್ತು ಪ್ರವೃತ್ತಿಯ ಸಹಜ ನಿಯಮಾಧಾರಿತ ಲೀನತೆ ಸಾಧ್ಯವಾಗದೆ ಕೇವಲ ದೈಹಿಕ ಮತ್ತು ಅಧಿಕಾರಗಳು ವಿಜೃಂಭಿಸಿದವು. ತನ್ಮೂಲಕ ಲಿಂಗದ ಮೇಲೆ ಲಿಂಗವು ಕಾಲ– ಸಂದರ್ಭಕ್ಕನುಗುಣವಾಗಿ ದಬ್ಬಾಳಿಕೆ ನಡೆಸಿದವು. ಒಂದು ಲಿಂಗ ಧರ್ಮ ಮತ್ತು ಮತ ಮೌಢ್ಯಗಳನ್ನೂ ತನಗೆ ಹೇಗೆ ಬೇಕೋ ಹಾಗೆ ನೆಯ್ದುಕೊಂಡು ಮತ್ತೊಂದು ಲಿಂಗವನ್ನು ದಾಸ್ಯಕ್ಕೆ ದೂಡಿ ದುಡಿಸಿಕೊಂಡಿದೆ. ಇದು ಚರಿತ್ರೆ; ನಡೆದ ಸತ್ಯ.

ಆಧುನಿಕ ಶಿಕ್ಷಣ ಸ್ತ್ರೀಗೆ ಅರಿವನ್ನು ಮೂಡಿಸಿದೆ. ಜೊತೆಗೆ ಅವಳು ಆರ್ಥಿಕವಾಗಿಯೂ ಸಬಲೀಕರಣ ಗೊಳ್ಳುತ್ತಿದ್ದಾಳೆ. ಪುರುಷ ನಿರ್ವಹಿಸುತ್ತಿದ್ದ ಹೆಚ್ಚುಕಡಿಮೆ ಎಲ್ಲ ಸಾಮಾಜಿಕ–ಆರ್ಥಿಕ–ಆಡಳಿತಾತ್ಮಕ ಪಾತ್ರಗಳನ್ನು ಅವಳು ಇಂದು ಸಮರ್ಥವಾಗಿ ನಿರ್ವಹಿಸುತ್ತಿದ್ದಾಳೆ. ಈ ಸಂದರ್ಭದಲ್ಲಿ ಅವಳು ಕೂಡ ಚರಿತ್ರೆಯಿಂದ ಪಾಠ ಕಲಿಯುವಂಥದ್ದು ಬಹಳಷ್ಟಿದೆ. ಅದೇ ಲಿಂಗ ಭಂಗ ಕ್ರಿಯೆ!

**ಶಿಕಾಕು**

## ಮಾತೇ ಮುತ್ತು

★ ಇನ್ನೊಬ್ಬರನ್ನು ನೋಡಿ ಕಲಿಯುವುದು ಒಳ್ಳೆಯ ಗುಣ, ಬಲ್ಲವರಿಂದ ಕಲಿಯಬೇಕು, ಮಾದರಿ ಮನುಷ್ಯರು ನಮಗೆ ಸ್ಫೂರ್ತಿ.

–ಫ್ರಾನ್ಸಿಸ್ ಬೇಕನ್

★ ಉಪದೇಶ ಎಷ್ಟೊಂದು ಸುಂದರವಾಗಿತ್ತು ಎಂದು ಉಪದೇಶಕನನ್ನು ಪ್ರಶಂಸೆ ಮಾಡುವುದಕ್ಕಿಂತ, ಅವನು ಹಾಗೆ ಮಾಡಿ ತೋರಿಸಲಿ ಎನ್ನುವುದರಲ್ಲಿ ಅರ್ಥವಿದೆ.

–ಸಂತ ಫ್ರಾನ್ಸಿಸ್

★ ಅಧ್ಯಯನದ ಬಗ್ಗೆ ಪ್ರೀತಿಯಿಂದಿದ್ದರೆ ಜೀವನದಲ್ಲಿನ ವಿಷಾದ, ಗ್ಲಾನಿಯ ಕ್ಷಣಗಳನ್ನು ಅದು ಆನಂದ ಮತ್ತು ಪ್ರಸನ್ನತೆಯ ಕ್ಷಣಗಳನ್ನಾಗಿ ಪರಿವರ್ತಿಸುವ ಶಕ್ತಿ ಹೊಂದಿದೆ.

–ಮಾಂಟಸ್ಕಿ

★ ಹಣವಿಲ್ಲದವನು ಕೆಲವೊಂದು ವಸ್ತುಗಳನ್ನು ಬಯಸುತ್ತಾನೆ. ಆದರೆ ಲೋಭಿ ಪ್ರತಿಯೊಂದು ವಸ್ತುವಿನ ಬಗ್ಗೆ ದೃಷ್ಟಿ ಇಡುತ್ತಾನೆ.

–ಬಂಕಿಮಚಂದ್ರ

★ ಸೋಲುವ ಕುದುರೆ ಲಗಾಮನ್ನು ದೂರುತ್ತದೆ!

–ಸ್ಯಾಮ್ಯೂಲೋವರ್

★ ಸತ್ಯ ಯಾವಾಗಲೂ ಒಂಟಿ, ಆದರೆ ಸುಳ್ಳಿಗೆ ನೆಂಟರ ಕೊರತೆಯಿಲ್ಲ!

–ಎಮರ್ಸನ್

★ ಸೌಂದರ್ಯ, ಚೆಲುವುಗಳಿಗಿಂತ ಗುಣವೇ ಯೋಗ್ಯವಾದದ್ದು.

–ಸ್ಮಿತ್

★ ಜೀವಂತ ಮನುಷ್ಯನಿಗೆ ಸೋಮಾರಿತನ ಮೃತ್ಯುವಿನಂತೆ.

–ಜೇರಿಮನ್ ಟೇಲರ್

★ ಸೋಮಾರಿತನ ಅನ್ನುವುದೂ ಒಂದು ಹಿಂಸೆ.

–ಮಹಾತ್ಮ ಗಾಂಧೀಜಿ

★ ನಿಮಗೆ ಆಪತ್ತು, ದುಃಖ ಮತ್ತು ಚಿಂತೆಗಳ ಕಾರ್ಮೋಡ ಮುಸುಕುವ ಮುಖ್ಯ ಕಾರಣವೆಂದರೆ ನಿಮಗೆ ನಿಮ್ಮ ಸಾಮರ್ಥ್ಯದ ಅರಿವಿಲ್ಲದಿರುವುದೇ ಕಾರಣ.

–ರಾಮತೀರ್ಥರು

★ ಏಕಾಗ್ರಚಿತ್ತನಾದ ವ್ಯಕ್ತಿಯು, ಅಮೂಲ್ಯವೂ ಅಪಾರವೂ ಆದ ಜ್ಞಾನರಾಶಿಯನ್ನು ಗಳಿಸಬಲ್ಲ.

–ವೀರೇಂದ್ರ ಹೆಗ್ಗಡೆ

★ ಮನುಷ್ಯರಿಗೆ ಧರ್ಮದ ಫಲ ಅನುಭವಿಸುವ ಇಚ್ಛೆಯಿದೆ, ಆದರೆ ಧರ್ಮವನ್ನು ಆಚರಿಸಬೇಕೆಂಬ ಇಚ್ಛೆಯಿಲ್ಲ!

–ವಿದುರ ನೀತಿ

★ ವಿಜ್ಞಾನ ಎಲ್ಲದರ ಬಗೆಗೂ ಮೊದಲು ಮಾತನಾಡುತ್ತದೆ ಮತ್ತು ಯಾವುದರ ಬಗೆಗೂ ಕೊನೆಯ ಮಾತನಾಡುವುದಿಲ್ಲ.

–ವಿಕ್ಟರ್ ಹ್ಯೂಗೊ